**<u>ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಸೇಡಂ.</u>**

**<u>ಸಿಸಿ ನಂ.1004/2016</u>**

ಫಿರ್ಯಾದಿಃ ಕರ್ನಾಟಕ ಸರಕಾರ ಪರಃ ಸೇಡಂ ಪೊಲೀಸ್ ಠಾಣೆ

-ಃಃ ವಿರುದ್ಧ ಃಃ-

ಆರೋಪಿ ನಂ.1ಃ ದೊಡ್ಡ ಸಾಬಯ್ಯ ತಂದೆ ಸಾಬಯ್ಯ ವಡ್ಡರ
ವಃ 50 ವರ್ಷ, ಉಃ ಕೂಲಿ ಕೆಲಸ
ಸಾಃ ಬಟಗೇರಾ (ಕೆ) ಗೇಟ್, ತಾಃ ಸೇಡಂ **(Abated)**

2 ಸ್ವಾಮಿ ತಂದೆ ದೊಡ್ಡ ಸಾಬಯ್ಯ ವಡ್ಡರ
ವಃ 25 ವರ್ಷ, ಉಃ ಕೂಲಿ ಕೆಲಸ
ಸಾಃ ಬಟಗೇರಾ (ಕೆ) ಗೇಟ್.

3. ರಮೇಶ ತಂದೆ ಶರಣಪ್ಪ ಇಂಗಳಗಿ
ವಃ 30 ವರ್ಷ, ಉಃ ಕೂಲಿ ಕೆಲಸ
ಸಾಃ ಚಿತ್ತಾಪೂರ

4. ಶಿವಾ ತಂದೆ ಮುಕರೇಪ್ಪ ವಡ್ಡರ
ವಃ 30 ವರ್ಷ, ಉಃ ಕೂಲಿ ಕೆಲಸ
ಸಾಃ ಚಿತ್ತಾಪೂರ

----

**<u>ದೋಷಾರೋಪಣೆ</u>**

ನಾನು ಶ್ರೀ ಬಾಲು, ಬಿ.ಎ., ಎಲ್.ಎಲ್.ಬಿ., ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರು, ಸೇಡಂ, ನಿಮ್ಮ ಮೇಲೆ ಹೊರಿಸುವ ಆರೋಪವೇನೆಂದರೆ,

ದಿನಾಂಕ 07-06-2016ರಂದು ರಾತ್ರಿ 08.30 ಗಂಟೆಯ ಸುಮಾರಿಗೆ ಸೇಡಂ ಪೋಲಿಸ ಠಾಣಾ ವ್ಯಾಪ್ತಿಯಲ್ಲಿ ಬರುವ ಬಟಗೇರಾ (ಕೆ) ಗೇಟ್ ಗ್ರಾಮದ ಪಿರ್ಯಾದಿಯ ಮನೆಯ ಮುಂದೆ ಚಾಸಾ.1,7 ನೇದ್ದವರು ಮನೆಯ ಅಂಗಳದಲ್ಲಿ ಕುಳಿತಿದ್ದಾಗ ಅರೋಪಿ 1 ರಿಂದ 4 ರವರು ಕೂಡಿಕೊಂಡು ಬಂದು ಮೋಟಾರ ಸೈಕಲ ಪಿರ್ಯಾದಿಯ ಎದುರುಗಡೆ ನಿಲ್ಲಿಸಿದ ವಿಷಯದಲ್ಲಿ ಜಗಳ ತೆಗೆದು ಆರೋಪಿ 2 ನೇದ್ದವನು ಕೈಯಿಂದ ಪಿರ್ಯಾದಿಗೆ ಹೊಡೆದಿದ್ದು, ಆ ಮೂಲಕ ಭಾ.ದಂ.ಸಂ. 323 ಸಂಗಡ 34 ರಲಡಿಯಲ್ಲಿ ಶಿಕ್ಷಾರ್ಹ ಅಪರಾಧಗಳನ್ನು ಮಾಡಿರುತ್ತೀರಿ, ಅದು ನನ್ನ ಸಂಜ್ಞೆತೆಗೆ ಬಂದಿರುತ್ತದೆ.

ಎರಡನೆಯದಾಗಿ ಮೇಲೆ ಹೇಳಲಾದ ದಿನ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರಾದ ನೀವು ನಿಮ್ಮ ಏಕೋದ್ದೇಶವನ್ನು ಈಡೇರಿಸಿಕೊಳ್ಳುವುದರ ಸಲುವಾಗಿ ಬಂದು, ಆರೋಪಿ 3 ನೇದ್ದವನು ಅಲ್ಲಿಯೇ ಇದ್ದ ಕಪಗೀರ (ಕಡಚಿ) ತೆಗೆದುಕೊಂಡು ಪಿರ್ಯಾದಿಯ ಹಣೆಗೆ ಬಲವಾಗಿ ಹೊಡೆದಿದ್ದರಿಂದ ತಲೆಯಿಂದ ರಕ್ತ ಶ್ರಾವವಾಗಲು ಪ್ರಾರಂಭಸಿತು, ಆರೋಪಿ 4 ನೇದ್ದವನು ಪಿರ್ಯಾದಿಗೆ ಅಲ್ಲಿಯೇ ಬಿದ್ದಿದ್ದ ಬಡಿಗೆಯನ್ನು ತೆಗೆದುಕೊಂಡು ಪಿರ್ಯಾದಿಯ ಹೊಟ್ಟೆಗೆ ಹಾಗೂ ಬೆನ್ನಿಗೆ ಹೊಡೆದು ರಕ್ತಗಾಯ ಹಾಗೂ ಗುಪ್ತಗಾಯಪಡಿಸಿದನು, ಆ ಮೂಲಕ

ಭಾ.ದಂ.ಸಂ. 324ರ ಸಂಗಡ 34 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧಗಳನ್ನು ಮಾಡಿರುತ್ತೀರಿ, ಅದು ನನ್ನ ಸಂಜ್ಞೆತೆಗೆ ಬಂದಿರುತ್ತದೆ.

ಮೂರನೆಯದಾಗಿ ಮೇಲೆ ಹೇಳಲಾದ ದಿನ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರು ತಮ್ಮ ಏಕೋದ್ದೇಶವನ್ನು ಈಡೇರಿಸಿಕೊಳ್ಳುವ ಸಲುವಾಗಿ ಆರೋಪಿ 1 ರಿಂದ 4ನೇದ್ದವರು ಬಂದು ಚಾಸಾ.1,7 ನೇದ್ದವರು ಮನೆಯ ಅಂಗಳದಲ್ಲಿ ಕುಳಿತಿದ್ದಾಗ ಜಗಳ ತೆಗೆದು ಅವರಲ್ಲಿಯ ಆರೋಪಿ 1 ನೇದ್ದವನು ಪಿರ್ಯದಿಗೆ ಏ ರಂಡಿ ಮಗನೇ ಯಲ್ಯಾ ಬಾ ಮನೆಯ ಹೊರಗಡೆ ಎಷ್ಟು ದಮ್ ಅದ ನೋಡಿಕೊಳ್ಳುತ್ತೇನೆ ಅಂತಾ ಅವಾಚ್ಯ ಶಬ್ದಗಳಿಂದ ಬೈದು ಸಾರ್ವಜನಿಕ ಶಾಂತತೆಗೆ ಭಂಗ ಉಂಟು ಮಾಡಿರುತ್ತಾರೆ ಆ ಮೂಲಕ ಭಾ.ದಂ.ಸಂ.ಕಲಂ 504ರ ಸಂಗಡ 34 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧಗಳನ್ನು ಮಾಡಿರುತ್ತೀರಿ, ಅದು ನನ್ನ ಸಂಜ್ಞೆತೆಗೆ ಬಂದಿರುತ್ತದೆ.

ಕೊನೆಯದಾಗಿ ಮೇಲೆ ಹೇಳಲಾದ ದಿನ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರು ತಮ್ಮ ಏಕೋದ್ದೇಶವನ್ನು ಈಡೇರಿಸಿಕೊಳ್ಳುವ ಸಲುವಾಗಿ ಬಂದು ಅವರ ಪೈಕಿ ಆರೋಪಿ 2 ನೇದ್ದವನು ಪಿರ್ಯಾದಿಗೆ ಈ ಮಗನಿಗೆ ಜೀವ ಸಹಿತ ಬಿಡಬ್ಯಾಡರಿ ಖಲ್ಲಾಸ ಮಾಡರಿ ಅಂತಾ ಜೀವದ ಬೆದರಿಕೆ ಹಾಕಿದ್ದು, ಆ ಮೂಲಕ ಭಾ.ದಂ.ಸಂ. 506ರ ಸಂಗಡ 34 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧಗಳನ್ನು ಮಾಡಿರುತ್ತೀರಿ, ಅದು ನನ್ನ ಸಂಜ್ಞೆತೆಗೆ ಬಂದಿರುತ್ತದೆ.

ಕಾರಣ ಮೇಲೆ ಹೇಳಿದ ಅಪರಾಧಗಳಿಗಾಗಿ ವಿಚಾರಣೆ ಎದುರಿಸಬೇಕೆಂದು ನಿರ್ದೇಶಿಸುತ್ತಿದ್ದೇನೆ.

ಸಹಿ/-

ದಿನಾಂಕಃ 16-05-2025 ಪ್ರ.ದ.ನ್ಯಾ.ದಂ. ಸೇಡಂ.

**<u>ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಸೇಡಂ.</u>**

**<u>ಸಿಸಿ ನಂ.1004/2016</u>**

ಫಿರ್ಯಾದಿಃ ಕರ್ನಾಟಕ ಸರಕಾರ ಪರಃ ಸೇಡಂ ಪೊಲೀಸ್ ಠಾಣೆ

-ಃಃ ವಿರುದ್ದ ಃಃ-

ಆರೋಪಿ ನಂ.1ಃ ದೊಡ್ಡ ಸಾಬಯ್ಯ ತಂದೆ ಸಾಬಯ್ಯ ವಡ್ಡರ
ವಃ 50 ವರ್ಷ, ಉಃ ಕೂಲಿ ಕೆಲಸ
ಸಾಃ ಬಟಗೇರಾ (ಕೆ) ಗೇಟ್, ತಾಃ ಸೇಡಂ **(Abated)**
ಹಾಗೂ ಇತರರು

**<u>ಆರೋಪಿತರ ಹೇಳಿಕೆ</u>**

ಪ್ರಃ-1) ಈ ಓದಿ ಹೇಳಲಾದ ದೋಷಾರೋಪಣೆಯನ್ನು ಕೇಳಿ ತಿಳಿದುಕೊಂಡಿರುವಿರಾ?

ಉಃ ಆ.2

ಆ-3

ಆ-4

ಪ್ರಃ-2) ನಿನ್ನ ತಪ್ಪನ್ನು ಒಪ್ಪಿಕೊಳ್ಳುತ್ತಿಯೋ ಅಥವಾ ವಿಚಾರಣೆ ನಡೆಯಬೇಕಾ?

ಉಃ ಆ.2

ಆ-3

ಆ-4

(ದೋಷಾರೋಪಣೆಯನ್ನು ಆರೋಪಿತರಿಗೆ ಓದಿ ಹೇಳಿದ್ದು, ಅವರು ನೀಡಿದ ಹೇಳಿಕೆಯನ್ನು ಯಥಾವತ್ತಾಗಿ ದಾಖಲಿಸಿದ್ದು, ಅದು ಸಂಪೂರ್ಣ ಸತ್ಯವಾಗಿರುತ್ತದೆಂದು ಪ್ರಮಾಣೀಕರಿಸುತ್ತೇನೆ)

ಸಹಿ/-

ದಿನಾಂಕ 16-05-2025 ಪ್ರ.ದ.ನ್ಯಾ.ದಂ. ಸೇಡಂ.